ಜಾ|| ನಂ.	ಪಟ್ಟ ನಂ.	ನಗದ ಹೆಸರು	ಪಟ್ಟೀ ಮೇರೆ ಅಂದಾಜ್ ರೂ
46	89	ವಜ್ರದ ಬೆಂಡವಾಲೆ ಜೋಡಿ 1ಕ್ಕೆ	1,000
47	91	ಪಚ್ಚೆ ವಜ್ರದ ಕರ್ನಫೂಲ್ ಜೋಡಿ 1ಕ್ಕೆ	600
48	139	ವಜ್ರದ ತೊಟ್ಟಬಳಿ ಜೋಡಿ 1ಕ್ಕೆ ಕೆಂಪು ಸಹಾ	11,700
49	144	ವಜ್ರ ಮುತ್ತಿನ ಕಂಕಣ ಜೋಡಿ 1ಕ್ಕೆ	1,500
50	353	ಚಿನ್ನದ ಕಾಲಕಪ್ಪ ಗೆಜ್ಜೆ ಜೋಡಿ 1ಕ್ಕೆ	154
51	445	ವಜ್ರದ ಅಕ್ಕಿಪಿಲ್ಲಿ ಜೋಡಿ 1ಕ್ಕೆ	550
52	476	ವಂಟಿ ಕೆಂಪಿನ ವುಂಗುರ 1ಕ್ಕೆ	20
53	486	ಡಿಟೋ ವುಂಗ) 1ಕ್ಕೆ	10
54	511	ಕೆಂಪಿನ ಅಡ್ಡಿಕೆ 1ಕ್ಕೆ	560
55	357	ಚಿನ್ನದ ಕಾಲಂದಿಗೆ ಜೋಡಿ 1ಕ್ಕೆ	22
56	530	ತಸಬೀರು ವುಂಗುರ 1ಕ್ಕೆ	15
57	554	ಗೊಂಬೆಜಂದವಾವು	75
58	555	ಕೆಂಪುಸಚ್ಚೆ ಅರ್ಧ ಜಂದ)	100
59	527	ಪಚ್ಚೆ ವುಂಗುರ 1ಕ್ಕೆ	10
60	117	ಕೆಂಪಿನ ಮಕರಕಂಠ 1ಕ್ಕೆ	4,000
			24,316
61	57	ಕೆಂಪಿನ ಪನ್ನೆ ಜೋಡಿ 1ಕ್ಕೆ	250
62	92	ಕೆಂಪಿನ ಬೆಂಡವಾಲೆ ಜೋಡಿ 1ಕ್ಕೆ	470
63	148	ವಜ್ರದ ಕಂಕಣ ಜೋಡಿ 1ಕ್ಕೆ	2,500
64	27	ಮುತ್ತಿನ ಕುಚ್ಚು 1ಕ್ಕೆ	750
65	134	ವಜ್ರದ ಬಳೆ 2ಕ್ಕೆ	1,000
66	433	ವಜ್ರದ ಹಾತ ಪಾಂಚಿ ಜೋಡಿ 1ಕ್ಕೆ	450
67	434	ಡಿಟೋ ಬಾಜೂಬಂದು 1ಕ್ಕೆ	800
68	179	ಜುಂಜಪಟ್ಟ 1ಕ್ಕೆ	600
69	35	ಮುತ್ತಿನ ಮೂಗುತಿ 2ಕ್ಕೆ	500
			7,320
		ಗ್ರಾಂಡ್ ಟೋಟಲ್	60,073

ಇ. ಸಿ. ಚಿದಂಬರಂ ಐಯ್ಯರ್,
ಪ್ಯಾಲೆಸ್ ಅ|| ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 31ನೇ ಮೇ 1884.

ಸಿಕಾರಿಪುರದಲ್ಲಿ ಹೊಸ ತಾಲ್ಲೂಕು ಕಚ್ಚೇರಿ ಕಟ್ಟಣವನ್ನು ಕಟ್ಟುವದಕ್ಕೆ ಮೈಸೂರು ಗವರ್ಮೆಂಟಿನಿಂದ ಮಂಜೂರಾಗಿರುತ್ತೇ[illegible]ಗಿ ಸದರೀ ಕೆಲಸವನ್ನು ನೆರವೇರಿಸುವದಕ್ಕೆ ಇದರಿಂದ ದರಖಾಸ್ತು ಆಪೇಕ್ಷಿಸಲ್ಪಡುತ್ತೆ.

1. ತಾಲ್ಲೂಕು ಕಚ್ಚೇರಿಗೆ ಗೊತ್ತಾದ ನಮೂನೇ ಪ್ರಕಾರ ಕಟ್ಟಣವು ಕಟ್ಟಿಸಲ್ಪಡತಕ್ಕದ್ದು. ಮತ್ತು ಸುಮಾರ್ 15,000 ರಾಯಿಗಳು ಖರ್ಚವಡು ಹಿಡಿಯತಕ್ಕದ್ದು.

2. ದರಖಾಸ್ತಿನಲ್ಲಿ ಕೆಲಸದ ಪ್ರತಿ ಷರತ್ತಿಗೂ ಖಾಯಿವ್ ಮಾಡಿದ ದರ, ಪೂರಾ ಕೆಲಸವು ಪೂರೈಸುವ ಕಾಲ, ಯಾವ ತಪ್ಪಲಿ ಉಂಟಾದರೆ ಆ ಬಗ್ಗೆ ದಂಡ ಇಂತಾದ್ದನ್ನು ನಮೂದಿಸತಕ್ಕದ್ದು.

3. ದರಖಾಸ್ತು ಬಂದು ಮಾಡಲ್ಪಟ್ಟು "ಶಿಕಾರಿಪುರದಲ್ಲಿ ಹೊಸತಾಲ್ಲೂಕು ಕಚ್ಚೇರಿಯನ್ನು ಕಟ್ಟುವ ಬಗ್ಗೆ ದರಖಾಸ್ತು" ಯೆಂದು ವಿಲಾಸ ಬರಯಲ್ಪಟ್ಟು, ಶಿವಮೊಗ್ಗೆಯಲ್ಲಿ ಶಿವಮೊಗ್ಗಾ ಡಿವೀಜ೯ ಎಗ್ಜಿಕ್ಯೂಟಿವ್ ಇಂಜನಿಯರಿಗೆ ಕಳುಹಿಸಲ್ಪಡತಕ್ಕದ್ದು.

ಸ೯ 1884ನೇ ಜೂ೯ 30ನೇ ಮುಕ್ತಾಯಿಗೆ ತರುವಾಯ ಯಾವ ದರಖಾಸ್ತೂ ತೆಗದುಕೊಳ್ಳಲ್ಪಡಲಾರದು.

4. ಇನ್ನೂ ಹೆಚ್ಚಿಗೇ ಸಂಗತಿಯೂ, ಸಬ್ ಹೆಡ್‌ಗಳ ಷೆಡ್ಯೂಲ್ ಪಟ್ಟಿಯೂ, ಇದರಡಿ ರುಜು ಮಾಡಿರುವವರಿಗೆ ಪ್ರತಖಾಸ್ತು ಮಾಡಿ ಪಡಕೊಳ್ಳಬಹುದು.

5. ಇದರಡಿ ರುಜು ಮಾಡಿರುವವರು ಕಮ್ಮಿ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಹಾಗೆ ಮಾಡಲಿಕ್ಕೆ ಯಾವ ಸಬಬನ್ನೂ ನಮೂದಿಸದೆ ಮಂಜೂರ್ಮಾಡತಕ್ಕ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

ಪಿ. ಎಸ್. ನಾಗವ೯ಕರ್, ಎಲ್. ಸಿ. ಇ.
ಎಗ್ಜಿಕ್ಯೂಟಿವ್ ಇಂಜನಿಯರ್.

ಶಿವಮೊಗ್ಗಾ ಸಬ್ ಡಿವೀಜ೯ ಮುನಸಿಫ್ ಮಾಜಿಸ್ಟ್ರೇಟ್ ಕೋರ್ಟಿನಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಈ ಕೋರ್ಟು 1883ನೇ ಇಸವಿ ಅರಿಜನಲ್ ಕೇಸ್ ನಂಬರ್ 70ನೇ ಮೊಕದ್ದಮಾದಲ್ಲಿ ಹಾಜರಾದ ಪೊಲೀಸಿನವರು ಗುಮಾನಿಮೇಲೆ ಹಿಡದು ಹಾಜರ್ ಪಡಿಸಿದ ನಂಬರ್ 4735ನೇ ಸ೯ 1878ನೇ ಇಸವಿ ಬಂಬಾಯಿ ನೋಟ್ 10 ರೂಪಾಯಿನ ಬಾಬತು ಎಷಟ್ಟುಗದ ಅರ್ಧ ತುಕಡೆ ಬೇದಾವೆ ಸೊತ್ತಾಗಿ ಸೇರಿಸಿಕೊಂಡಿದ್ದೆ, ಯಿದಕ್ಕೆ ಯಾರಾದರು ವಾರಸ್ದಾರ್ರು ಯಿದ್ದರೆ ಈ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಕೋರ್ಟು ರೂಬರೂ ಹಾಜರಾಗಿ ಬಾಧ್ಯತೆ ವ್ಯವಹರಿಸಿಕೊಳ್ಳಬೇಕು ಆ ಮೇರೆ ಯಾರ್ಹೂ ಬಾರದಿದ್ದರೆ ನಾಯಿದಾನಂತರ ಸರಕಾರಕ್ಕೆ ಕೇರಿಸಿಕೊಳ್ಳಲಾಧೀತು.

ತಾರೀಖು 7ನೇ ಮಾಪ೯ ಜೂ೯ 1884ನೇ ಇಸವಿ.

ವಿ. ಡಿ. ಪೊನ್ನರಂಗಂ ಮೊದಲಿಯಾರ್,
ಸಕೆಂಡ್ ಕ್ಲಾಸ್ ಮಾಜಿಸ್ಟ್ರೇಟ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 13ನೇ ಜೂ೯ 1884

ಮಂಜಿರಾಬಾದ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ವೆಂಕಟರಮಣಯ್ಯನವರಿಗೆ, 1872ನೇ ಇಸವಿ Xನೇ ನಂಬರ್ ಆಕ್ಟ್‌ಂಬ ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 23ನೇ ಬಿ. ಸೆಕ್ಷನ್ ಅನುಸರಿಸಿ ಇದರಡಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತೆ,—

1. ಲಾಷ್ ವಿಚಾರಣೆ ಬಗ್ಗೆ ಅಧಿಕಾರ, (ಸೆಕ್ಷನ್ 135)
2. ಅವರಿಗೆ ದರ್ಯಾಫ್ತ್ ಮಾಡುವದಕ್ಕೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕರೇರುಗಳ ಫಿರ್ಯಾದುಗಳನ್ನ ದಾಖಲ್ಮಾಡಿಕೊಳ್ಳುವದಕ್ಕೆ ಅಧಿಕಾರ (ಸೆಕ್ಷನ್ 141)
3. ನಿರೋಧ ವಗ್ಯೆರೆಗಳನ್ನು ಅಡ್ಡೀಪಡಿಸುವಂತೆ ಹುಕ್ಕುಂ ಮಾಡುವದಕ್ಕೆ ಅಧಿಕಾರ (ಸೆಕ್ಷನ್ 518)
4. ಹೇಸಿಗೆಗಳು ಬಾರ್ ಬಾರ್ ನಡಿಯುವದನ್ನು ಅಡ್ಡೀ ಪಡಿಸುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷನ್ 519.)

ಜಿ. ಎಚ್. ಮೈಕಲ್ಜಾರ್,
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ಸ೯ 1884ನೇ ಇಸವಿ ಮೇ ತಿಂಗಳ ಕಾಲಸ್ಥಿತಿ ರಿಪೋರ್ಟು.

ಶಿವಮೊಗ್ಗಾ ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಇದರಡಿ ಕಂಡಂತೆ ಮಳೆ ಬಿದ್ದಿರುತ್ತೆ:—

ತಾಲ್ಲೂಕು.	ಅಂ.	ಸೆಂಟ್ಸ್.	ತಾಲ್ಲೂಕು	ಅಂ.	ಸೆಂಟ್ಸ್
ಶಿವಮೊಗ್ಗಾ	0	24	ಸೊರಬ ..	0	0
ಚನ್ನಗಿರಿ .	0	59	ಸಾಗರ ..	0	0
ಹೊನ್ನಾಳಿ ..	1	10	ನಗರ ..	1	60
ಶಿಕಾರಿಪುರ ..	1	45	ತೀರ್ಥಹಳ್ಳಿ ..	1	6
			ದಾವಣಗೆರೆ ..	1	45